Dc-364
R ಕ್ರ No B T P-2

ಗೋ ಮಾತಾಕೀ ಜೈ

ಭಾರತದ ಆದ್ಯಂತ ಗೋವಧೆಯು
ಶಾಸನಬದ್ಧವಾಗಿ
ನಿರೋಧವಾಗಲಿ

Cow Slaughter should be
banned immediately.

19 ನೇ ವರ್ಷ

ಗೋರಕ್ಷಣ
GORAKSHANA

ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್

ಆಗಸ್ಟ್ 31 Aug st 1968

Please help in every way
This Humanitarian
PropagandaPaper

★

ಗೋರಕ್ಷಣಾ, ಅಹಿಂಸಾ
ಪ್ರಚಾರಪತ್ರಿಕೆ

ವಿನಂತಿ– ಸಕಲರೀತಿಯಲ್ಲೂ ನೆರವುನೀಡಿರಿ

ಬಿಡಿ ಪ್ರತಿ 2 ಪೈಸೆ

ಕೃಷ್ಣಾವತಾರದ ವೈಶಿಷ್ಟ್ಯ

ಕೆ. ವೆಂಕಟರಾಮಾಚಾರ್ಯ

ವಿಜಯ ಸಾಹಿತ್ಯಮಾಲೆ, ಸುರತ್ಕಲ್ಲು

ಶ್ರೀದೇವರ ಅವತಾರಗಳಲ್ಲಿ ಕೃಷ್ಣಾವತಾರವೇ ಅತಿ ಸಮೀಪ ಕಾಲಘಟ್ಟದಲ್ಲಿ ನಡೆದುದರಿಂದ, ಕೆಲವರು ಅದರ ವೈಶಿಷ್ಟ್ಯಗಳನ್ನು ಉಲ್ಲೇಖಿಸುತ್ತಾರೆ. ಅದಕೊಂಮಿಗೆ ಕೃಷ್ಣಾವತಾರದ ಹಲವಾರು ವಿಶೇಷಾಂಶಗಳು ಹೇಳತಕ್ಕವು ಇವೆ. ಹದಿನಾಲ್ಕು ಲೋಕಗಳ ಪರಿಚಯವಾಗಿ ಮೂರು ಲೋಕಗಳು ಹೆಸರಿಕೆಗೊಂಡಿವೆ– ಸ್ವರ್ಗ, ಮರ್ತ್ಯ, ಪಾತಾಳಗಳೆಂದು. ಕೃಷ್ಣನು ಈ ಮೂರು ಲೋಕಗಳಲ್ಲೂ ಹಲವಾರುಬಾರಿ ಸಂಚರಿಸಿ, ಸ್ವಪ್ರಭಾವವನ್ನು ಎಲ್ಲೆಡೆ ಬೀರಿದವನೆಂದು ಪುರಾಣಾಂತರಗಳಿಂದ ವೇದ್ಯವಹ.

1) ಕೃಷ್ಣನು ಗುರುವಾದ ಸಾಂದೀಪನ ಮಗನನ್ನು ತರಲು ಸ್ವರ್ಗಕ್ಕೆ ಹೋಗಿದ್ದನು. ಆಂತೆ, ಅರ್ಜುನನ ಪ್ರತಿಜ್ಞೆಯೊಂದನ್ನು ಪೂರೈಸಲು "ಪಾರ್ವನ ಪಿಳ್ಳೆಯ ಪೋದ ಜೀವಮಂ" ತರಲು (ಪಂಪ ಭಾರತ) ಸ್ವರ್ಗಕ್ಕೆ ಹೋಗಿ ಬಂದನು (ಹರಿವಂಶದಲ್ಲಿ ಈ ಕತೆ ಇದೆ), ನರಕಾಸುರನನ್ನು ಕೊಂದು ಆತನ ವಶದಲ್ಲಿದ್ದ ಕುಂಡಲಗಳನ್ನು ಅದಿತಿಗೆ ಒಪ್ಪಿಸಲು ಹಾಗೂ ಪಾರಿಜಾತ ವೃಕ್ಷವನ್ನು ಭೂಮಿಗೆ ತರಲು ಸ್ವರ್ಗಕ್ಕೆ ಹೋಗಿದ್ದನು ಎಂಬ ಸವಿರತ ಹೇಳಿದೆ.

2) ಪಾತಾಳದಲ್ಲಿದ್ದ ಬಲಿಚಕ್ರವರ್ತಿಯ ಮಿಗಿಲಾದ ಉಡೆಯನ್ನು ತನ್ನ ಪೆಟ್ಟಾವ್ಯಕ್ಕಾಗಿ ಮಡುಪೆಮಾಡಿಸಲು ಕೃಷ್ಣ ಸೈನ್ಯಹೊಡನೆಹೋಗಿಹೊಡೆದಿಟ್ಟನು. [ಅರ್ಜುನನು ಅಶ್ವಮೇಧ ಕಾಲದಲ್ಲಿ ಹಲವು ರಾಜರನ್ನು ಗೆಲ್ಲಲು ಕೃಷ್ಣನ ಸಾನಿಧ್ಯವೇ ಕಾರಣವೆಂದು ಜೈಮಿನಿ ಭಾರತದಲ್ಲಿದೆ (ಕನ್ನಡದಲ್ಲಿ ಲಕ್ಷ್ಮೀಶನು ಈ ಕತೆ ವಿಸ್ತರಿಸಿದ್ದಾನೆ)]

3) ಮಧ್ಯಮ (ಮರ್ತ್ಯ) ಲೋಕದಲ್ಲಿ ಕೃಷ್ಣನು ಅವತರಿಸಿ, ಯಾದವ ವಂಶಕ್ಕೆ ರಾಜಸದವಿಯನ್ನು ಹೊರಕಿಸಿಕೊಟ್ಟನು : ಹಲವಾರು ದುಷ್ಟರನ್ನು ತಾನೂ ಬಲರಾಮನೂ (ಇವನೂ ದೇವರ ಅವತಾರವೆನ್ನುತ್ತಾರೆ) ಸಂಹರಿಸಿದ್ದನು. ಅಂತೆಯೇ ತನ್ನಪರಿಂದ ಹಲವಾರು ಅಸಾಧು ಜನರನ್ನು ದಮಿಸಿ ಲೋಕಕಲ್ಯಾಣಕ್ಕೆ ತಳಹದಿಯನ್ನು ಹಾಕಿದನು. ಹೀಗೆಲ್ಲಾ ನೋಡಿದರೆ, ಕೃಷ್ಣನೊಬ್ಬ 'ಕರ್ಮಯೋಗಿ" ಯೆಂದು ವ್ಯಕ್ತವಾಗುತ್ತದೆ. ಆದರೆ, ಇದಕ್ಕೆಲ್ಲಾ ಬಿನ್ನವಾಗಿ ಇವನು "ಜ್ಞಾನಯೋಗಿ' ಯೂ ಆಗಿದ್ದಾನೆಂದು 'ಭಗವದ್ಗೀತೆ' ಯಿಂದ ಅರಿವಾಗುತ್ತದೆ. ಭಗವದ್ಗೀತೆಯ ವ್ಯಾಖ್ಯಾನವೆಂತೆ, ಮುಂದೊಮ್ಮೆ ಅರ್ಜುನನಿಗೆ ತಾನೇ ವಿಸ್ತಾರವಾಗಿ ಪುನಃ "ಅಷ್ಟೋತ್ತರ ಗೀತೆ" ಯನ್ನಿ ಹೇಳಿದನು!

ಅಷ್ಟುಮಾತ್ರವಲ್ಲ ; 'ಭಕ್ತಿಯೋಗ' ವನ್ನು ಕೃಷ್ಣನು ಪುರಸ್ಕರಿಸಿದ್ದಾನೆಂದು ತೋರುತ್ತದೆ. ತನ್ನ ರೂಪವನ್ನು ತಿಲಿಯುಯಲ್ಲಿ ಕೆತ್ತಿಸಿದವನೆಂದೂ, ಅದೇ ವಿಗ್ರಹವೇ ಶ್ರೀ ಮಧ್ವಾಚಾರ್ಯರಿಗೆ ಹೊಕ್ಕಿಸು ಉಡುಪಿಯಲ್ಲಿ ಪ್ರತಿಷ್ಠಿತವಾಯಿತೆಂದೂ ಹೇಳುತ್ತಾರೆ. ಗೋಪರು ಆಚರಿಸುತ್ತಿದ್ದ "ಇಂದ್ರಯಾಗ" ವನ್ನು ಬದಲಿಸಿ "ಗೋಪೂಜೆ' ಯನ್ನು ಪ್ರಾರಂಭಿಸಲು ಪ್ರೇರಕನಾದನೆಂದೂ ಬೇರೆ ಕೇಳುತ್ತದೆ. ಈತನ ಅವತಾರಗಳ ಕತೆಗಳಿಗಿಂತಲೂ

ಕೃಷ್ಣಾವತಾರದ ಮಹಿಮೆಗಳು ಹಲವಾರು ಪುರಾಣ–ಗ್ರಂಥಾದಿಗಳಲ್ಲಿ ಜೇಳಿವೆ. ಉಪನ್ಯಸಿಸತ್ಕಾಲದಿಂದಲೂ ಕೃಷ್ಣ–ವಾಸುದೇವ ನಾಮವು ಪ್ರಚುರ್ಯವಿದೆ.

ಒಟ್ಟನಲ್ಲಿ ಕೃಷ್ಣನು ಎಂಟನೆಯವತಾರವೆಂದು ಬುಲ್ಲೇಖಿಸಿಕೊಂಡಿಹನು (ದಶಾವತಾರವೆಂಬ ಗಣನೆಯಲ್ಲಿ ಕೃಷ್ಣ 8 ನೆಯವ)

ಕೃಷ್ಣಾವತಾರದ ವಿಚಾರ ಚಾರಿತ್ರಿಕವಾಗಿಯೂ ಒಪ್ಪಬರುತ್ತದೆ. ಇಂತಹ 'ಪುರುಷೋತ್ತಮ" ನು ಎಲ್ಲರಿಗೂ ಒಳ್ಳೆ ತನ್ನು ಸೀಡಲಿ !

ಧನಗಳ ಅಭಿವೃದ್ಧಿಗಾಗಿ

ಸಬ್ಬಲ್ಲಿ, ಧಾರವಾಡ ಹಾಲು ಪೂರೈಕೆಯೋಜನೆಯ ಕಕ್ಷೆಯಲ್ಲಿ ಬರುವ ಹಾಲು ಸಂಗ್ರಹಣ ಅಭಿವೃದ್ಧಿಗಾಗಿ ರೂ. 20 ಲಕ್ಷ ಯೋಜನೆಯೊಂದನ್ನು ಪ್ರಾರಂಭಿಸುವ ಉದ್ದೇಶವಿದ್ದು, ಸರಕಾರವು ಈ ಯೋಜನೆಯ ಪೂರ್ವಭಾವಿ ಕೆಲಸಗಳನ್ನು ಕೈಗೊಳ್ಳಲು ಆದೇಶ ನೀಡಿದೆ.

ಕಾಮಧೇನು ಸಂಬಂಧದ ಕತೆ

ತಿರುಚಿರಪಳ್ಳಿ ಜಿಲ್ಲೆಯಲ್ಲಿಯ ತಿರುಗೋಕರ್ಣಂನಲ್ಲಿ ಪ್ರಖ್ಯಾತ ಗೋರಕರ್ಣೇಶ್ವರ ದೇವಾಲಯವಿದೆ. ಇದರ ಕತೆ ಸ್ಥಳಪುರಾಣದಲ್ಲಿ ಹೀಗಿದೆ–

ಭೂದೇವಲೋಕದ ಹಸು ಕಾಮಧೇನು ಇಂದ್ರನ ಸಭೆಗೆ ಒಂದು ದಿನ ಹೋತ್ತಾಗಿ ಬರಲು, ಇಂದ್ರನು ಅದನ್ನು ಭೂಲೋಕದಲ್ಲಿ ಜನಿಸುವಂತೆ ಶಪಿಸಿದನು. ಅದು ಭೂಲೋಕದಲ್ಲಿ ಹುಟ್ಟಿದನಂತರ ಹಸುವು ಗಂಗಾ ನೀರನ್ನು ತನ್ನ ಕಿವಿಗಳಲ್ಲಿ ತಂದೂ ಅದನ್ನು ಸ್ವಾಮಿಗೆ ಅಭಿಷೇಕಮಾಡುತ್ತಿತ್ತು. ಹೀಗಿರುವಾಗ ದೇವರು ಇದರ ಭಕ್ತಿಯನ್ನು ಪರೀಕ್ಷಿಸಲು, ಒಂದು ದಿನ ಹುಲಿರೂಪದಲ್ಲಿ ಇದನ್ನು ಕೊಲ್ಲಲು ಬಂದನು. ಆಗ ಹಸುವು ತನ್ನ ಕರ್ತವ್ಯ ನೆರವೇರಿಸಲೂ, ತನ್ನ ಕರುವಿಗೆ ಹಾಲು ಕುಡಿಸಲೂ ಅವಕಾಶ ಕೇಳಿ, ನಂತರ ಹುಲಿಗೆ ಆಹಾರವಾಗಲು ವಾಗ್ದಾನ ಮಾಡಿ, ಹಾಗೇ ಮಾಡಿತು. ದೇವರು ಇದರ ಭಕ್ತಿಯ ಬಗ್ಗೆ ಸಂತೋಷಗೊಂಡು, ಬರ್ಜನ ಕ್ಷೋಟ್ಟಿ, ಇಂದ್ರನ ಶಾಪದಿಂದ ವಿಮೋಚನೆಗೊಳಿಸಿದನು. (ಗೌ = ಹಸು, ಕರನವಂ = ಕಿವಿ) ಗೋಕರಣೇಶ್ವರನೆಂದು ಸ್ವಾಮಿಗೆ ಹೆಸರಾಯಿತು.

ಶ್ರೀ ಕೃಷ್ಣ ಪರಮಾತ್ಮನ ಕೃಪೆಯಿಂದ 'ಗೋರಕ್ಷಣ" ಕ್ಕೆ 19 ನೇ ವರ್ಷ ಸ್ಸಾರಂಭವಾಯಿತು.

★

Ban The Cow slaughter

Sri G D Somani, a prominent Industrialist has stated that he stronly advised as a well wisher of the Congress party to ban the slaughter of cow species immediately and thus avert the the present unprecidented national crisis.

★

Pranimitra Sri Jayantilal N. Manker has stated– Even from purely economical point of view total prohibition of cows calves bulls and bullocks through Central legislation is essential The Government of Burma tried partial prohibition of slaughter but when it failed to save even useful cattle they totally prohibited the slaughter of all cattle and then could improve them



ಹಸುವಿನಿಂದ ಹೆಚ್ಚಾಗಿ ಹಾಲು ಪಡೆಯಲು ಹೇಗೆ

ಸುಮಾರು 300 ದಿನಗಳಲ್ಲಿ 2250 ಕಿಲೋ ಹಾಲು ಕೊಡುವಂತಹ ಹಸುವಿನ ಆಹಾರದಲ್ಲಿ 80 ಕಿಲೋ ಸ್ಪ್ರೌಟ್ಸ್, 102 ಕಿಲೋ ಕೊಬ್ಬು, 109 ಕಿಲೋ ಸಕ್ಕರೆ, 15 ಕಿಲೋ ಖನಿಜ ಪದಾರ್ಥಗಳು ಮತ್ತು ಉಳಿದುದನ್ನು ನೀರಿನ ರೂಪದಲ್ಲಿ ಒದಗಿಸುತ್ತದೆ. ಹಸುಹಾಲು ಕೊಡುವವರೆಲ್ಲಿ ತನ್ನ ದೇಹವನ್ನು ಸರಿಯಾಗಿರಿಸಿಕೊಂಡು ಕರುಗಳನ್ನು ಕೊಡಬೇಕು. ಇದಕ್ಕೋಸ್ಕರ ನಿಮ್ಮ ಹಸುವಿಗೆ ಸರಿಯಾಗಿ ಮೇವನ್ನು ಕೊಡಬೇಕು ಹಣ ಉಳಿಸಬೇಕೆಂದು ಹಸುಗಳಿಗೆ ಸರಿಯಾಗಿ ಮೇವು ಕೊಡದಿದ್ದರೆ ಅವುಗಳ ಆರೋಗ್ಯ ಕೆಡುತ್ತದೆ. ಅವುಗಳಿಂದ ಬಂದ ಕರುಗಳು ಆರೋಗ್ಯವಾಗಿರುವುದಿಲ್ಲ. ಕೊನೆಯದಾಗಿ ಹಸುಗಳು ಸರಿಯಾಗಿ ಹಾಲು ಕೊಡಲಾರದು. ತನ್ನ ಆರೋಗ್ಯವನ್ನು ಕಾಪಾಡಿಕೊಂಡು, ಕರುಗಳನ್ನೂ ಕೊಟ್ಟು, ಸಾಕಷ್ಟು ಹಾಲು ಕೊಡಬೇಕಾದರೆ, ಹಸುಗಳಿಗೆ ಕೊಬ್ಬು, ಪ್ರೋಟೀನ್, ವಿಟಮಿನ್, ಖನಿಜ ಪದಾರ್ಥಗಳು ತರ್ಕರಿ ಪಿಷ್ಟ ಇವೆಲ್ಲಾ ಇರುವಂತಹ ಮೇವನ್ನು ಸಾಕಷ್ಟು ಒದಗಿಸಬೇಕು. ಆದ್ದರಿಂದ ಇವೆಲ್ಲಾ ಇರುವಂತ ಮೇವನ್ನು ತಯಾರಿಸಿ ಅದನ್ನು ಹಸುವಿನ ದೇಹದ ತೂಕ ಮತ್ತು ಆದು ಕೊಡುವ ಹಾಲಿನ ಪರಿಣಾಮಕ್ಕೆ ತಕ್ಕಂತೆ ಕೊಡಬೇಕು. [ಎಫಾ.ಫಿ.]

ವುಡ್‌ಲಾಂಡ್ ಜನಪ್ರಿಯ 4 ನೇ ವಾರ

—

— ಮನಮೋಹಕ ಹಿಂದಿ ಚಿತ್ರ —

— ಫರ್ಜ್ —

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಬಬಿತಾ, ಕಾಂಚನಾ,
ಮುಕ್ರಿ, ಆಗಾ ಮುಂತಾದವರು

ಸಂಗೀತ —

ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೇರ— 30 8-68 ರಿಂದ

ಚಿತ್ತಾಕರ್ಷಕ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕ ಈಸ್ಟ್‌ಮೆನ್ ಕಲರ್‌ನ ಹಿಂದಿ ಚಿತ್ರ
ಪಾತ್ರ– ಶಮ್ಮಿ ಕಪೂರ್, ಆಜಶ್ರೀ, ಮಹಮ್ಮದ್ ಜ್, ಪ್ರಾಣ್, ಮಹಮೂದ್

ಹಿಂದೂಗಳು

ಗೋವಧೆ ಸಸ ತಿನ್ನತ್ತರೆಯೇ ?

ಹೊಂಗಸೂರು ಶಾಖೆಯ ಶಾಸ್ತ್ರಧರ್ಮ ಪ್ರಚಾರ ಸಭೆಯ ಶ್ರೀ ಅನಂತನರಸಿಂಹಯ್ಯಂಗಾರ್ಯರವರು ಟ್ರೂತ್ ಪತ್ರಿಕೆಗೆ ಕಳುಹಿಸಿರುವ ಉತ್ತರದ ಅನುವಾದವಿದು—

ನಾನು ಹಸ್ನೆರಡು ಗ್ರಾಮಗಳ ಸವರ್ಣ ಹಿಂದೂಗಳ ಪುರೋಹಿತನಾಗಿರುವುದರಿಂದ ಸಾಮಾನ್ಯವಾಗಿ ಎಲ್ಲಾ ಹಿಂದೂಗಳ ಪದ್ಧತಿಯು ಪರಿಚಯವು ನನಗಿರುತ್ತೆ. ದಕ್ಷಿಣ ಭಾರತದಲ್ಲಿ ಯಾವ ಹಿಂದುವೂ ಕೂಡ ಜೀವಿರುವ ಹಸುವನ್ನಾಗಲೀ ಎತ್ತನ್ನಾಗಲೀ ಕೊಲ್ಲುವುದಿಲ್ಲ. ಸವರ್ಣ ಹಿಂದೂಗಳು ಏನೇ ಆದರೂ ಗೋಮಾಂಸ ತಿನ್ನುವುದಿಲ್ಲ. ಮೈಸೂರು ದೇಶದಲ್ಲಿ ಸುಮಾರು ಅರ್ಧ ಜನರು ಸಸ್ಯಾಹಾರಿಗಳು ; ಮಂಗಳೂರು ಜಿಲ್ಲೆಯ ಕೆಲವರನ್ನು ಬಿಟ್ಟು ಮಿಕ್ಕ ಎಲ್ಲ ಬ್ರಾಹ್ಮಣರು, ಎಲ್ಲಾ ವೀರಶೈವರು, ಆಗ್ನೇಯ ವೈಶ್ಯರು ಬಣಜಿಗರು, ದೇವಾಂಗದವರು, ಆರಸುಗಳು, ನಾಮಧಾರಿಗೌಡರು ಇತ್ಯಾದಿ ಜಾತಿಯವರೆಲ್ಲಾ ಶುದ್ಧ ಸಸ್ಯಾಹಾರಿಗಳು; ಅವರುಗಳು ಮಾಂಸ ಮುಟ್ಟುವುದಿಲ್ಲ.

ಪರಿಶಿಷ್ಟ ಜಾತಿಗಳಲ್ಲಿ ಹರಿಜನರು, ಚಮ್ಮಾರರು ಮತ್ತು ಭಂಗಿಗಳು ಮಾತ್ರ ಗೋಮಾಂಸವನ್ನು ತಿನ್ನುತ್ತಾರೆ. ಹರಿಜನರು ಗೋವನ್ನು ಕೊಲ್ಲುವುದಿಲ್ಲ ; ಆದರೆ ಇತರರಿಂದ ಮಾಂಸವಡೆದು ತಿನ್ನುತ್ತಾರೆ. ಚಮ್ಮಾರರು ಮತ್ತು ಭಂಗಿಗಳು ಸತ್ತ ಗೋವುಗಳ ದೇಹವನ್ನು ಶೇಖರಿಸುತ್ತಾರೆಯೇ ವಿನಃ ಜೀವಂತ ಹಸು ಅಥವಾ ಎತ್ತನ್ನು ಕೊಲ್ಲುವುದಿಲ್ಲ. ಪರಿಶಿಷ್ಟ ಜಾತಿಗಳಲ್ಲಿ ಗಿರಿಜನರು ಸವರ್ಣ ಹಿಂದೂಗಳ ಗುಂಪಿಗೇ ಸೇರುತ್ತಾರೆ ; ಅವರಲ್ಲಿ ನಾಲ್ಕು ಪಂಗಡಗಳಿವೆ : ಸೋಲಿಗಗೌಡ, ಮಲಾರ್ ಗೌಡ, ಹಂಡೆಕುರುಬ, ತೊದವ ಎಂಬವಾಗಿ ಅವರ ಹೆಸರುಗಳು ; ಅವರ ಪದ್ಧತಿ ಮತ್ತು ಸಂಪ್ರದಾಯಗಳೆಲ್ಲಾ ಸಾಮಾನ್ಯವಾಗಿ ಸವರ್ಣ ಹಿಂದೂಗಳಂತೆಯೇ ಇದೆ : ಅವರು ಗೋಮಾಂಸವನ್ನು ತಿನ್ನುವುದಿಲ್ಲ ; ಕೊರಮ ಮತ್ತು ಕೆಸರಜ ಎಂಬ ಪರಿಶಿಷ್ಟ ಜಾತಿಗಳವರು ಗ್ರಾಮಗಳಲ್ಲಿಯೇ ವಾಸ ಮಾಡುತ್ತಾರೆ : ಅವರುಗಳೂ ಸವರ್ಣ ಹಿಂದೂಗಳಿಗೇ ಸೇರಿದ್ದಾರೆ, ಮತ್ತು ಗೋಮಾಂಸ ತಿನ್ನುವುದಿಲ್ಲ. ದಕ್ಷಿಣ ಭಾರತದಲ್ಲಿ ಪರಿಶಿಷ್ಟ ಜಾತಿಗಳೂ ಸೇರಿ ಯಾವ ಹಿಂದುವೂ ಹಸುವನ್ನಾಗಲೀ ಎತ್ತನ್ನಾಗಲಿ ಕೊಲ್ಲುವುದಿಲ್ಲ. ಹರಿಜನರು ಎಮ್ಮೆಗಳನ್ನು ಕೊಲ್ಲುತ್ತಾರೆಯೇಹೊರತು ಹಸುಗಳನ್ನಲ್ಲ. ಮೇಲ್ಕಂಡ ಪರಿಶಿಷ್ಟ ಜಾತಿಗಳ ವಿನಾ ಮಿಕ್ಕ ಜಾತಿಗಳವರು ಸತ್ತ ಶರೀರವನ್ನೂ ಮುಟ್ಟುವುದಿಲ್ಲ.

ಉತ್ತರಾಯಣ ಪುಣ್ಯಕಾಲದ ದಿನ ಪರಿಶಿಷ್ಟ ಜಾತಿಗಳವರೂ ಸೇರಿ ಎಲ್ಲಾ ಹಿಂದೂಗಳೂ ಹಸುಗಳನ್ನೂ ಎತ್ತುಗಳನ್ನೂ ಪೂಜಿಸುತ್ತಾರೆ. ಕೆಲವು ಗ್ರಾಮಗಳಲ್ಲಿ ಸೋಮವಾರ ಎತ್ತುಗಳನ್ನು ಗಾಡಿಗೆ ಕಟ್ಟಕೂಡದು. ಮಂಡ್ಯ ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ರೈತನು ಜಮೀನು ಉತ್ತ ನಂತರ ಗ್ರಾಮಕ್ಕೆ ಹಿಂತಿರುಗುವಾಗ ನೇಗಲನ್ನು ತಾನು ಹೊತ್ತು ಬರಬೇಕು; ಎತ್ತುಗಳಿಗೆ ಹೊರಿಸಕೂಡದು. ದಕ್ಷಿಣ ಭಾರತದಲ್ಲಿ ಎಲ್ಲಾ ಹಿಂದೂಗಳೂ ಗೋವನ್ನು ತಾಯಿಯಂತೆ ಗೌರವಿಸುತ್ತಾರೆ.

ವೀರಶೈವರಲ್ಲಿ ಕೆಲವರು ಎತ್ತುಗಳು ಸತ್ತಾಗ, ಸತ್ತ ಶವವನ್ನು ಕೊಯ್ಯುವವರಿಗೆ ಕೊಡುವುದಿಲ್ಲ. ತಮ್ಮ ಜಮೀನುಗಳಲ್ಲಿ ಸಮಾಧಿ ಮಾಡಿ ಹನ್ನೊಂದನೇ ದಿನ ಆರಾಧನೆ ಮಾಡುತ್ತಾರೆ. ದಕ್ಷಿಣ ಭಾರತದಲ್ಲಿ ಬಹುಸಂಖ್ಯಾತರು ಸಸ್ಯಾಹಾರಿಗಳಾಗಿರುವಾಗ, ಅವರು ಹೇಗೆತಾನೇ ಗೋಮಾಂಸ ತಿನ್ನುತ್ತಾರೆ. ಜಾತಿದ್ವೇಷ ಹೆಚ್ಚು ಮಾಡುತ್ತಿರುವ ಪತಿತರಾದ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರು ಗೋಮಾಂಸ ತಿನ್ನಬಹುದು, ಇತರ ಹಿಂದೂಗಳಲ್ಲ.

★ ಈ ತಿಂಗಳಿಂದ 'ಗೋರಕ್ಷಣ" 4 ಪುಟಗಳುಳ್ಳದ್ದಾಗಿಬೇಕೆಂದು ಇಚ್ಛಿಸಲಾಗಿತ್ತು : ಅವಕಾಶವಾಗಲಿಲ್ಲ.

Help The Gorakshana

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

Edited, Printed & Published by Dharmaprachara Nirata M S Krishna Rao (Proprietor) at the Sarvavadi Press Chamarajapuram, Mysore-4